

# ಗಡಿಯಾರ

■ ರಾಜಶೇಖರ ಕುಕ್ಕುಂದಾ

ಕಲೆ: ಸಂತೋಷ್ ಸಸಿಹಿತ್ಲು

ಮನೆಯಲಿ ಗೋಡೆಗೆ
ಅಂದಕೆ ಚೆಂದಕೆ
ಬೇಕೇ ಬೇಕು ಗಡಿಯಾರ

ಹಗಲೂ ಇರುಳೂ
ವೇಳೆಯ ತಿಳಿಯಲು
ಬೇಕೇ ಬೇಕು ಗಡಿಯಾರ

ಕೈಯಲಿ ಥಳ ಥಳ
ಫಳ ಫಳ ಹೊಳೆಯಲು
ಬೇಕೇ ಬೇಕು ಗಡಿಯಾರ

ನಿದ್ದೆಗೆ ಇಳಿದರೆ
ಎಚ್ಚರಗೊಳಿಸಲು
ಬೇಕೇ ಬೇಕು ಗಡಿಯಾರ



# ಪಾರಿವಾಳ

ವಿನ್ಯಾಸ್

ಶಾಂತಿಯ ಸಂಕೇತ
ಪುಟ್ಟ ಪಾರಿವಾಳ
ಗಾಂಧಿಯ ಪ್ರೀತಿಯ
ಪುಟ್ಟ ಪಾರಿವಾಳ

ಬಿಳಿಯ ಬಣ್ಣದ
ಪುಟ್ಟ ಪಾರಿವಾಳ
ಸ್ವಚ್ಛ ಮನಸ್ಸಿನ
ಪುಟ್ಟ ಪಾರಿವಾಳ

ರಾಜಣ್ಣನ ಚಿತ್ರದ
ಪುಟ್ಟ ಪಾರಿವಾಳ
ಪ್ರೇಮ ಸಂದೇಶದ
ಪುಟ್ಟ ಪಾರಿವಾಳ

ಸ್ವಾತಂತ್ರ್ಯ ಸಾರುವ
ಪುಟ್ಟ ಪಾರಿವಾಳ
ಬಿಡುಗಡೆ ತೋರುವ
ಪುಟ್ಟ ಪಾರಿವಾಳ

ಬಾನಲಿ ಹಾರುವ
ಪುಟ್ಟ ಪಾರಿವಾಳ
ಗುಣದಲಿ ದೊಡ್ಡದು
ಪುಟ್ಟ ಪಾರಿವಾಳ

■ ನರಸಿಂಹಾರೆಡ್ಡಿ

# ಕುಂಚ ಪ್ರಪಂಚ



**ಪೂರ್ವಿ ಪಿ.**
8ನೇ ತರಗತಿ, ವಿವೇಕಾನಂದ
ಸೆಂಟ್ರಲ್ ಸ್ಕೂಲ್, ಪುತ್ತೂರು








**ಅನನ್ಯಾ ಮೋಹನ್**
6ನೇ ತರಗತಿ, ಶ್ರೀ ಕುಮಾರನ್ ಚಿಲ್ಡ್ರನ್ಸ್
ಹೋಮ್, ಬೆಂಗಳೂರು



**ಕೃಷ್ಣ ಸಂದೇರ್**
7ನೇ ತರಗತಿ, ಆದರ್ಶ ವಿದ್ಯಾಲಯ ಹರಪನಹಳ್ಳಿ
ವಿಜಯನಗರ

